ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.

ಸಿ.ಸಿ. ಸಂಃ **808/2024**

| | | |
|---|---|---|
| ಸಾಕ್ಷಿಯ ಹೆಸರುಃ | ದಿಲೀಪ್ | PW-2 |
| ತಂದೆಯ ಹೆಸರುಃ | ಚಂದ್ರಶೇಖರ | |
| ವಯಸ್ಸುಃ | 39 ವರ್ಷ | ಪ್ರಮಾಣೀಕರಿಸಿದ ದಿಃ 25.02.2026 |
| ಉದ್ಯೋಗಃ | ಬ್ಯಾಂಕ್ ವ್ಯವಸ್ಥಾಪಕರು, ಎಸ್.ಬಿ.ಐ, ಬಿ.ಎಂ.ರಸ್ತೆ, ಪಿರಿಯಾಪಟ್ಟಣ | |
| ವಾಸ ಸ್ಥಳಃ | ಪಿರಿಯಾಪಟ್ಟಣ | |

ಮುಖ್ಯ ವಿಚಾರಣೆಃ ದೂರುದಾರರ ಪರ ವಕೀಲರಿಂದಃ

ನಾನು ಪಿರಿಯಾಪಟ್ಟಣದ ಬಿ.ಎಂ ರಸ್ತೆ ಎಸ್.ಬಿ.ಐ ಬ್ಯಾಂಕ್ ನಲ್ಲಿ 11 ಜುಲೈ 2025 ರಿಂದ ಇಲ್ಲಿಯವರೆಗೆ ವ್ಯವಸ್ಥಾಪಕರಾಗಿ ಕೆಲಸ ಮಾಡುತ್ತಿದ್ದೇನೆ.

1. ನಾನು ಈ ದಿನ ನ್ಯಾಯಾಲಯದ ಸಮನ್ಸ್ ಮೇಲೆ ಹಾಜರಿದ್ದು, ಕೆ.ಪೂರ್ಣಿಮಾ ರವರ ಅಕೌಂಟ್ ನಂ.64001191746 ಗೆ ಸಂಬಂಧಪಟ್ಟ ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸುತ್ತಿದ್ದೇನೆ.
2. ಅಕೌಂಟ್ ಓಪನಿಂಗ್ ಫಾರಂನ್ನು ನಿಪಿ - 11 ಎಂದು,
3. ಮಾದರಿ ಸಹಿ ಪೋಟೋ ನಿಪಿ - 12 ಎಂದು,
4. ಬ್ಯಾಂಕ್ ಸ್ಟೇಟ್ಮೆಂಟ್ ನ್ನು ನಿಪಿ - 13 ಎಂದು ಗುರುತಿಸಲಾಯಿತು.
5. ನಿಪಿ - 1 ರಲ್ಲಿರುವ ಚೆಕ್ಕು ನ್ಯಾಯಾಲಯದ ಮುಂದಿರುವ ಆರೋಪಿಯ ಸಹಿ ಎಂದರೆ, ನನಗೆ ಹೇಳಲು ಬರುವುದಿಲ್ಲ ಆದರೆ ಪೋಟೋ ಅವರಿಗೆ ಹೋಲಿಕೆಯಾಗುತ್ತಿಲ್ಲ ಎಂದು ನುಡಿಯುತ್ತಾರೆ.

(ಈ ಸಮಯದಲ್ಲಿ ದೂರುದಾರರ ಪರ ವಕೀಲರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ದೂರುದಾರರ ಪರ ವಕೀಲರಿಂದಃ

1. ನಿಪಿ - 1 ನ್ನು ಪೂರ್ಣಿಮಾ ಕೆ. ರವರಿಗೆ ನೀಡಿದ ಚೆಕ್ ಎಂದರೆ ಸರಿ.
2. ನ್ಯಾಯಾಲಯದ ಮುಂದಿರುವ ಆರೋಪಿಯೇ ನಿಪಿ - 1 ರ ಚೆಕ್ಕನ್ನು ದೂರುದಾರರಿಗೆ ನೀಡಿರುತ್ತಾರೆ ಎಂದರೆ, ನನಗೆ ಹೇಳಲು ಬರುವುದಿಲ್ಲ.
3. ನಿಪಿ-2 ರ ಪ್ರಕಾರ ನಿಪಿ-1 ರ ಚೆಕ್ಕನ್ನು ದೂರುದಾರರೇ ನಿಮ್ಮ ಬ್ಯಾಂಕಿಗೆ ಅವರ ಖಾತೆ ಮುಖಾಂತರ ಹಾಜರುಪಡಿಸಿರುತ್ತಾರೆ ಎಂದರೆ, ಸರಿ.

4. ನಿಪಿ - 2 ರಂತೆ ಸಾಕಷ್ಟು ಹಣವಿಲ್ಲ ಎಂದು ಹಿಂಬರಹ ನೀಡಿದ್ದೀರಾ ಎಂದರೆ ಸರಿ.

5. ನಿಪಿ - 1 ರ ಚೆಕ್ಕು ನ್ಯಾಯಾಲಯದ ಮುಂದಿರುವ ಆರೋಗೆ ಸಂಬಂಧಪಟ್ಟಿದ್ದು ಎಂದರೆ, ಕೆ. ಪೂರ್ಣಿಮಾ ರವರದ್ದು ಎಂದು ಹೇಳಬಹುದು, ಆದರೆ ಆರೋಪಿಯದೇ ಎಂದು ನನಗೆ ಹೇಳಲು ಬರುವುದಿಲ್ಲ.

6. ಕೆ. ಪೂರ್ಣಿಮಾ ಎಂಬ ಹೆಸರಿನಲ್ಲಿ ಆರೋಪಿಯೇ ನಿಮ್ಮ ಬ್ಯಾಂಕಿನಲ್ಲಿ ಖಾತೆ ತೆರೆದಿರುತ್ತಾರೆ ಎಂದರೆ, ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>

ಇಲ್ಲ ಎಂದು ನುಡಿಯುತ್ತಾರೆ.

ಮರು ವಿಚಾರಣೆಃ ಇಲ್ಲ.

<u>ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು</u>

<u>ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.</u>

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ